ಇದ್ದ ಮನೆಯಲ್ಲಿ ಪುಟ್ಟಸ್ವಾಮಾಚಾರ್ರು ತಮ್ಮ ಪತ್ನಿ ಕಾಳಮ್ಮನವರೊಂದಿಗೆ ಇದ್ದರು. ಅದೊಂದು ಸಾಂಪ್ರದಾಯಿಕವಾದ ಸಣ್ಣ ಮಾಳಿಗೆ ಮನೆ. ಮನೆಯೊಳಗೆ ಒಂದು ಮೋಟುಗೋಡೆ ಇದ್ದು, ಒಳಭಾಗವನ್ನು ಅಡುಗೆಮನೆಯೆಂದು ಕರೆಯುತ್ತಿದ್ದರು. ಪುಟ್ಟಸ್ವಾಮಾಚಾರ್ರು ಪೂಜಾರಿಕೆಯೊಂದಿಗೆ ಮಕ್ಕಳಿಗೆ ತಾಯತ ಕಟ್ಟುವುದು, ಸಣ್ಣಪುಟ್ಟ ಜ್ವರ ಬಂದವರಿಗೆ ಮಂತ್ರಿಸುವುದನ್ನು ಮಾಡುತ್ತಿದ್ದರು. ಇವರ ಪತ್ನಿ ಕಾಳಮ್ಮನವರು ಮಕ್ಕಳಿಗೆ ಸುಟಿಗೆ ಹಾಕುವುದು, ಹೆಂಗಸರಿಗೆ ಭಟ್ಟಿ ತೆಗೆಯುವುದು, ಮೂರುದಾರಿ ಸೇರುವ ಕಡೆ ಮಕ್ಕಳಿಗೆ 'ಬಿದ್ದಗೂಳು' ತಗೆಯುವುದನ್ನು ಮಾಡುತ್ತಿದ್ದರು. ಇದಕ್ಕಾಗಿ ಈ ದಂಪತಿ ಯಾರಿಂದಲೂ ಒಂದು ಬಿಡಿಗಾಸನ್ನೂ ಮುಟ್ಟುತ್ತಿರಲಿಲ್ಲ. ಯಂತ್ರ ಕಟ್ಟಿಸಿಕೊಂಡವರು ಮಾತ್ರ ಜುಲುಮೆ ಮಾಡಿದರೆ ನಾಲ್ಕಾಣೆ ಅಥವಾ ಎಂಟಾಣೆ ಪಡೆಯುತ್ತಿದ್ದರು. ಇವಿಷ್ಟೆ ಈ ದಂಪತಿಯ ಆದೀಕವಾಗಿತ್ತು. ಪೂಜಾರಪ್ಪನವರಿಗೆ ಎಲೆ ಅಡಕೆ ಮೆಲ್ಲುವ ಚಟವಿತ್ತು. ಹೀಗಾಗಿ ತಮ್ಮ ಬಳಿ ಬಂದವರಿಂದ ಎಲೆ ಅಡಕೆಯನ್ನು ಮಾತ್ರ ತಪ್ಪದೆ ತಗೆದುಕೊಳ್ಳುತ್ತಿದ್ದರು. ನನಗೆ ತಿಳಿದಂತೆ ನಮ್ಮ ಊರಿನ ಮೊದಲ ವೈದ್ಯರೆಂದರೆ ಇವರೆ. ನಮಗೆ ಸೋಳಿ ಜ್ವರ ಬಂದರೆ ವೈದ್ಯ ಮಾಡುತ್ತಿದ್ದುದೇ ಈ ಪುಟ್ಟಸ್ವಾಮಾಚಾರ್ರು. ಅವರ ವೈದ್ಯ ಎಂದರೆ, ನಮಗೆ ಕಣ್ಣುಮುಚ್ಚಿ ಕುಳಿತುಕೊಳ್ಳಲು ಹೇಳಿ, ನಮಗೆ ತಿಳಿಯದ ಯಾವುದೋ ಮಂತ್ರವನ್ನು ಪಠಿಸುತ್ತಾ ವಿಭೂತಿಯನ್ನು ಉಜ್ಜಿ, ಉಜ್ಜಿ ಅದರ ದೂಳನ್ನು ನಮ್ಮ ಮುಖದ ಮೇಲೆ 'ಊಫ್' ಎಂದು ಊರುವುತ್ತಿದ್ದರು. ಅವರು ಊದಿದ ರಭಸಕ್ಕೆ ನಮ್ಮ ಮುಖದ ಮೇಲೆ ಹಿಮದಗಡ್ಡೆ ಬಿದ್ದಂತೆ ಭಾಸವಾಗುತ್ತಿತ್ತು. ನಾವು ಭಯದಿಂದ ಹೀಕರಿಸುತ್ತಿದ್ದೆವು. ಹೀಗೆ ಮೂರು ಸಲ ಮಾಡಿ, 'ಬಿಡ್ತು' ಎಂದು ನಮ್ಮಿಂದ ಹೇಳಿಸಿ ಮನೆಗೆ ಕಳುಹಿಸುತ್ತಿದ್ದರು. ಹೋಗುವಾಗ ಪುಟ್ಟಸ್ವಾಮಾಚಾರ್ರು ಒಳಗಿನಿಂದ ಒಂದು ತುಂಡು ಕಲ್ಲುಸಕ್ಕರೆ ತಂದು ನಮ್ಮ ಕೈಗೆ ಕೊಡುತ್ತಿದ್ದರು. ಇದೊಂದೆ ನಮಗೆ ಆಪ್ಯಾಯಮಾನವಾದ ಸಂಗತಿಯಾಗಿತ್ತು. ನಮ್ಮ ಮುಖದ ಮೇಲೆ ಕುಳಿತ ವಿಭೂತಿ ದೂಳಿನಿಂದ ಕಣ್ಣುತೆರೆಯಲು ಸಾಧ್ಯವಾಗುತ್ತಿರಲಿಲ್ಲ. ಮುಖ ಒರೆಸಿಕೊಳ್ಳಲು ಮುಂದಾದರೆ ತಾಯವ್ವ ಬಿಡುತ್ತಿರಲಿಲ್ಲ. ಆ ರಾತ್ರಿಯನ್ನು ನಾವು ಹೀಗೆಯೇ ಕಳೆಯಬೇಕಾಗಿತ್ತು.

ಇದರ ಜೊತೆಗೆ ಪುಟ್ಟಸ್ವಾಮಾಚಾರ್ರು ನಮ್ಮ ಹಳ್ಳಿಯ ಬಯಲಾಟದ ಭಾಗವತರೂ ಆಗಿದ್ದರು. ಅವರ ಅದ್ಭುತ ಕಲೆಗಾರಿಕೆಯಿಂದ ನಮ್ಮೂರಿನ ಬಯಲಾಟದ ತಂಡ ನಮ್ಮ ಸುತ್ತಿಗೆಲ್ಲಾ ಹೆಸರುವಾಸಿಯಾಗಿತ್ತು. ಎತ್ತರದ ಆಳು, ಅಣ್ಣೆ ಹಾವಿನಂತೆ ನೆರೆಬಂದ ನೀಳವಾದ ಕೇಶರಾಶಿ. ಮುಂದೆಲೆಯನ್ನು ಲಾಳಾಕಾರವಾಗಿ ಚೌರಮಾಡಿಸಿಕೊಂಡಿರುತ್ತಿದ್ದರು. ಮುಡಿಯಲ್ಲಿ ಚೆಂಡುಹೂವೊಂದನ್ನು ಯಾವಾಗಲೂ ಮುಡಿದಿರುತ್ತಿದ್ದರು. ಹಣೆಯ ಮೇಲೆ ಸದಾ ಹೊಳೆಯುತ್ತಿದ್ದ ವಿಭೂತಿ ಪಟ್ಟೆ, ನಡುವೆ ಕುಂಕುಮ. ಕಿವಿಯಲ್ಲಿ ಹೊಳೆಯುವ ಒಂಟಿ. ಮಂಡಿ ಮುಚ್ಚುವಂತಿರುತಿದ್ದ ಅಂಗಿ, ಮೊಳಕಾಲಿನವರೆಗೆ ಇದ್ದ ಧೋತರ. ಬದುಕಿನ ಯಾವ ಸಂಕಷ್ಟಗಳೂ ಕದಲಿಸಲಾಗದ ಅವರ ಪ್ರಶಾಂತವಾದ ಮುಖ. ವೈಯಕ್ತಿಕ ಹಿತಕ್ಕಿಂತ ಸಮುದಾಯದ ಹಿತವೇ ಮುಖ್ಯವೆಂದು ಭಾವಿಸಿದ್ದ ಅವರ ಚಿಂತನೆ ಮತ್ತು ನಡವಳಿಕೆ ನಮ್ಮೂರಿನವರ ಪಾಲಿಗೆ ಆದರ್ಶವಾಗಿತ್ತು. ಅವರ ಪತ್ನಿ ಕಾಳಮ್ಮನವರೂ ಕೂಡ ಪುಟ್ಟಸ್ವಾಮಾಚಾರರಂತೆ ಮಾಗಿದ ವ್ಯಕ್ತಿತ್ವ. ಸಂಕಷ್ಟಕ್ಕೆ ಸಿಲುಕಿದವರು ಯಾರೇ ಆಗಿರಲಿ